ಆನಂದ ಪಾಟೀಲ

# ಮಲಗಿತು ಮಾತು ನೂರು ದಳಗಳ ಮುಚ್ಚಿ ಕನಸಿನಲ್ಲಿ

‘ಸುಮನಸ’ ಶ್ರೀನಿವಾಸ ಉಡುಪ (8 ಜನವರಿ 1933– 11 ಏಪ್ರಿಲ್ 2020) ಅವರಿಗೆ ಸಂದ ಅಭಿನಂದನಾ ಗ್ರಂಥದ ಹೆಸರು. ಉಡುಪರೊಂದಿಗೆ ಒಡನಾಡಿದವರು ಹಾಗೂ ಅವರ ಸಾಹಿತ್ಯದ ರುಚಿಯನ್ನು ಸವಿದವರೆಲ್ಲ ಸುಮನಸ್ಸಿಗೆ ಮಾರುಹೋದವರೇ. ಕನ್ನಡದ ವಿಮರ್ಶೆಯ ವಿವೇಕವನ್ನು ಹೆಚ್ಚಿಸುವಂತೆ ಬರೆದ, ಕನ್ನಡ ಮಕ್ಕಳಿಗೆ ಚಿರಕಾಲ ಬಾಳುವ ಪದ್ಯಗಳನ್ನು ಕೊಟ್ಟ ಉಡುಪರು ಅಪೂರ್ವ ಕಾವ್ಯವೊಂದು ಪೂರ್ಣಗೊಂಡಂತೆ ತೆರೆಮರೆಗೆ ಸರಿದಿದ್ದಾರೆ.

ಮಕರಂದ ವಿನಯ; ವಿನ್ಯಾಸ ಮಾತಿನ ಚಂದ.
ಶಬ್ದ ಅಳಿಯಿಸಿ ಉಳಿಸಿ ಅನುರಣನ
ಮಾತು ನೊಂದೀತೆಂದು ಲಾಲಿ ನಾಲಗೆಯಲ್ಲಿ.
ಶಬ್ದ ಗೆದ್ದಾವೆ ಬಿಡಿಸಿಡಲು ಮನವ.

ಹಿರಿಯ ಕವಿ ಎಚ್.ಎಸ್. ವೆಂಕಟೇಶಮೂರ್ತಿ ಅವರು ಎನ್. ಶ್ರೀನಿವಾಸ ಉಡುಪರ ಬಗೆಗೆ ರಚಿಸಿದ ಕವಿತೆಯಲ್ಲಿನ ಕೆಲವು ಸಾಲುಗಳಿವು. ಶ್ರೀನಿವಾಸ ಉಡುಪರ ಬಗೆಗೆ ಮಾತನಾಡುವವರೆಲ್ಲ ಅವರ ಮೃದು ಸ್ವಭಾವ, ಮೆಲುನುಡಿ, ಆಡಂಬರವಿಲ್ಲದ ಸಾದಾತನ ಇಂತವುಗಳ ಕುರಿತು ಮೊದಲು ಮಾತನಾಡತೊಡಗುವುದು ಸಾಮಾನ್ಯ. ಅಷ್ಟರ ಮಟ್ಟಿಗೆ ಅವರ ಸನಿಹ ಬಂದವರಿಗೆಲ್ಲ ಅವರ ವ್ಯಕ್ತಿತ್ವ ಹತ್ತಿರವಾಗಿಬಿಟ್ಟಿರುತ್ತದೆ. ಇಂಥ ವ್ಯಕ್ತಿ ಬರೆದದ್ದು ಒಂದಾದರೆ, ಬದುಕಿದ್ದು ಮತ್ತೂ ಒಂದಾಗಿ ನಮ್ಮಲ್ಲಿ ಅಳಿಯದೆ ಉಳಿಯುತ್ತಲೇ ಹೋಗುತ್ತದೆ. ತೀರ್ಥಹಳ್ಳಿಯ ಅವರ ಆಪ್ತರು ಅವರಿಗೆ ಅಭಿನಂದನಾ